**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ: 82/2014** **CW**-11 **PW**-08

**ಸಾಕ್ಷಿಯನ್ನು ದಿಃ 29.05.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಉತ್ತಮ್ ಕುಮಾರ್ ಹೆಚ್ ಪಿ |
| ತಂದೆಯ ಹೆಸರುಃ | ಪೂಲ್ ಚಂದ್ |
| ವಯಸ್ಸುಃ | 53 ವರ್ಷ |
| ವೃತ್ತಿಃ | ಚಿನ್ನದ ವ್ಯಾಪಾರ |
| ವಾಸ ಸ್ಥಳಃ | ಹಾಸನ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಈಗ ಸಾಕ್ಷಿಗೆ ನಿಪಿ 7 ನ್ನು ತೋರಿಸಲಾಗಿ, ಸಾಕ್ಷಿಯ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2013 ರಲ್ಲಿ ಪೋಲೀಸರು ಹಾಸನದಲ್ಲಿರುವ ನನ್ನ ಚಿನ್ನದ ಅಂಗಡಿ ಉತ್ತಮ್ ಜ್ಯುವೆಲರ್ಸ್ ಗೆ ಬಂದಿದ್ದು, ಆ ಸಮಯದಲ್ಲಿ ಮಾಡಿರುತ್ತೇನೆ. ನಿಪಿ 7 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಚಿನ್ನದ ಒಡವೆಗಳನ್ನು ಕೊಟ್ಟಿರುವುದಿಲ್ಲ. ಆ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಮ್ಮ ಅಂಗಡಿಗೆ ಕರೆದುಕೊಂಡು ಬಂದಿರುವುದಿಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>**

ದಿನಾಂಕ 21.11.2013 ರಂದು ಪೊಲೀಸರು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನನ್ನ ಚಿನ್ನದ ಅಂಗಡಿಗೆ ಕರೆದುಕೊಂಡು ಬಂದಿದ್ದು, ನಾನು ಆತನನ್ನು ನೋಡಿ ಗುರುತಿಸಿ ಈತ ನನಗೆ ಕೆಲವು ಚಿನ್ನದ ಆಭರಣಗಳನ್ನು ಮಾರಾಟ ಮಾಡಿರುತ್ತಾನೆ ಎಂದು ನಾನು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ನಾನು ಪೋಲೀಸರಿಗೆ ಒಂದು ಜೊತೆ 4.200 ಮಿಲಿಯ ಒಂದು ಜೊತೆ ಜೇಡ ಮತ್ತು ಹವಳದ ಚಿನ್ನದ ಓಲೆ, 3.850 ಮಿಲಿಯ ಒಂದು ಜೊತೆ ರೂಬಿ ಹರಳಿನ ಚಿನ್ನದ ಓಲೆ, 4.200 ಗ್ರಾಮ್ ನ ಒಂದು ಜೊತೆ ಜೇಡಾ ಹರಳಿನ ಚಿನ್ನದ ಓಲೆ, 3.200 ಗ್ರಾಮ್ ನ ಒಂದು ಜೊತೆ ಹವಳದ ಹರಳಿನ ಚಿನ್ನದ ಓಲೆ, 4.530 ಗ್ರಾಮ್ ನ ಒಂದು ಬಿಳಿ ಹರಳಿನ ಚಿನ್ನದ ಉಂಗುರ, 1.980 ಗ್ರಾಮ್ ನ 2 ಚಿನ್ನದ ಬೇಬಿ ರಿಂಗ್ ಮತ್ತು 8.980 ಗ್ರಾಮ್ ನ ಒಂದು ಚಿನ್ನದ ನಕ್ಲೇಸ್ ನ್ನು ಒಟ್ಟು 30.840 ಗ್ರಾಮ್ ನ ಚಿನ್ನದ ಒಡವೆಗಳನ್ನು ನಾನು ಪೋಲೀಸರ ಮುಂದೆ ತೂಕ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಆ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ–11 ಎಂದು ಗುರುತಿಸಲಾಯಿತು. ಸದರಿ ಚಿನ್ನದ ಒಡವೆಗಳನ್ನು ಪೋಲೀಸರು ಸಂಜೆ 4.30 ಗಂಟೆಗೆ ನನ್ನ ಮತ್ತು ಚಾಸಾ 6 ಮತ್ತು 7 ರವರ ಸಮಕ್ಷಮ ನಿಪಿ 7 ರಂತೆ ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮೇಲೆ ಹೇಳಿದ ಎಲ್ಲಾ ವಿಚಾಗ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ.**

**ಮರುವಿಚಾರಣೆಃ ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

(ದೀಪು.ಬಿ.ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ 1016/2017** **CW**-06 **PW**-07

**ಸಾಕ್ಷಿಯನ್ನು ದಿಃ 15.03.2022 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಲಕ್ಷ್ಮಯ್ಯ |
| ತಂದೆಯ ಹೆಸರುಃ | ತಿಮ್ಮಯ್ಯ |
| ವಯಸ್ಸುಃ | 51 |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಕಲಸಿಂದ ಗ್ರಾಮ, |

**ಮುಖ್ಯವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ, ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 09-05-2017 ರಂದು ಕಲಸಿಂದ ಗ್ರಾಮದ ತಿಮ್ಮಯ್ಯನವರ ಮನೆಯ ಬಳಿ ಮಾಡಿರುತ್ತೇನೆ. ಗಲಾಟೆ ಸಂಬಂಧ ಪೋಲೀಸರು ಮಹಜರ್ ಮಾಡಲು ಬಂದಾಗ ಮಾಡಿರುತ್ತೇನೆ. ಆಗ ಸಮಯ ಬೆಳಿಗ್ಗೆ 7.00 ರಿಂದ 9.00 ಗಂಟೆಯಾಗಿತ್ತು. ನಿಪಿ-2 ಕ್ಕೆ ನನ್ನ ಜೊತೆ ಚಾಸ-4,5 ಸಹಿ ಮಾಡಿರುತ್ತಾರೆ. ಪೋಲೀಸರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಘಟನಾ ಸ್ಥಳದಲ್ಲಿ ಚಾಸ-1 ರವರು ಹಾಜರಿದ್ದು, ನಿಪಿ-2 ಕ್ಕೆ ಸಹಿ ಮಾಡಿದ್ದಾರೆ ಎಂದರೆ ಸರಿ. ನಿಪಿ-2 ನ್ನು ಬೆಳಿಗ್ಗೆ 11.10 ರಿಂದ 11.45 ರ ಅವಧಿಯಲ್ಲಿ ಬರೆಯಲಾಗಿದೆ ಎಂದರೆ ಸರಿ.ಸ

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎನ್.ಕೆ ವಕೀಲರಿಂದಃ</u>**

ನಿಪಿ-2 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೋಲೀಸರು ನನಗೆ ಲಿಖಿತ ಮತ್ತು ಮೌಖಿಕವಾಗಿ ನೋಟೀಸ್ ನೀಡಿರುವುದಿಲ್ಲ. ನಿಪಿ-2 ರ ಕಾಲಕ್ಕೆ ಸುಮಾರು 10 ಜನರು ಸೇರಿದ್ದರು. ಅವರುಗಳೆಂದರೆ ನಾಗರಾಜು, ನಂಜಮ್ಮ, ತಿಮ್ಮಯ್ಯ, ರಂಗಯ್ಯ, ಗೌರಮ್ಮ, ರಾಜಯ್ಯ, ಕೆಂಪಮ್ಮ, ಪಲ್ಲವಿ, ನಂಜಪ್ಪ, ಗಂಗಮ್ಮ. ಉಳಿದಂತೆ ಯಾರೂ ಇರಲಿಲ್ಲ. ಪೋಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ, ಮತ್ತು ನಿಪಿ-2 ನ್ನು ಸ್ಥಳದಲ್ಲಿ ತಯಾರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು ಠಾಣೆಯಲ್ಲಿ ಸಹಿಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲಾ</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ದೀಪು.ಬಿ.ಸಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**